**3 ನೇ ಅಪರ ಮುಖ್ಯ ಮಹಾನಗರ ದಂಡಾಧಿಕಾರಿಗಳ ನ್ಯಾಯಾಲಯ,**

**ಬೆಂಗಳೂರು ನಗರ.**

**ಸಿಸಿ. 2963/2021**

| | |
|---|---|
| **ಸಾಕ್ಷಿದಾರರ ಹೆಸರು** | **ಪ್ರವೀಣ ಕುಲಕರ್ಣಿ** |
| **ತಂದೆಯ ಹೆಸರು** | **ರಾಘವೇಂದ್ರ ರಾವ್** |
| **ವಯಸ್ಸು** | **42 ವರ್ಷ** |
| **ಉದ್ಯೋಗ** | **ಸಹಾಯಕ ಶಾಖಾ ವ್ಯವಸ್ಥಾಪಕರು, ಕರ್ನಾಟಕ ಬ್ಯಾಂಕ , ಹಾವೇರಿ ಶಾಖೆ.** |
| **ವಾಸ** | **ಹಾವೇರಿ ಜಿಲ್ಲೆ.** |
| **ಪ್ರಮಾಣೀಕರಿಸಿದ ದಿನಾಂಕ** | **20/07/2023** |

**ಮುಖ್ಯ ವಿಚಾರಣೆ : ಹಿ.ಸ ಸ. ಅಭಿಯೋಜಕರವರಿಂದ :**

ನಾನು 28/12/2017 ರಿಂದ ಮೇ 2019 ರವರೆಗೆ ಫಿರ್ಯಾದಿ ಬ್ಯಾಂಕ್ ನ ಶಾಖಾ ವ್ಯವಸ್ಥಾಪಕನಾಗಿ ಸೇವೆ ಸಲ್ಲಿಸಿರುತ್ತೇನೆ. ಆರೋಪಿಯು ದಿನಾಂಕ 27/04/2015 ರಿಂದ 12/12/2017 ರವರೆಗೆ ಫಿರ್ಯಾದಿ ಬ್ಯಾಂಕ್ ನ ಶಾಖಾ ವ್ಯವಸ್ಥಾಪಕರಾಗಿ ಕರ್ತವ್ಯ ನಿರ್ವಹಿಸಿರುತ್ತಾರೆ. ಕಂಪನಿ ಅಧಿನಿಯ 1913 ರ ಅಡಿಯಲ್ಲಿ ಕರ್ನಾಟಕ ಬ್ಯಾಂಕ್ ನೊಂದಣಿಯಾಗಿದ್ದು, ಪ್ರಧಾನ ಕಛೇರಿಯು ಮಂಗಳೂರಿನಲ್ಲಿ ಇದೆ. ಸದರಿ ಬ್ಯಾಂಕ್ ನ ಒಂದು ಶಾಖೆಯು ನೃಪತುಂಗ ರಸ್ತೆಯ, ಮಹಾನಗರ ದಂಡಾಧಿಕಾರಿಗಳ ನ್ಯಾಯಾಲಯಗಳ ಆವರಣದಲ್ಲಿದೆ.

2. ನಮ್ಮ ಶಾಖೆಯಲ್ಲಿ ಶ್ರೀಮತಿ. ಯಾಮಿನಿ ಹೆಚ್.ಜೆ., ಶ್ರೀಮತಿ. ಯಶಸ್ವಿನಿ ಹೆಚ್.ಜೆ. ಮತ್ತು ಶ್ರೀ. ಮಿಥುನ ಹೆಚ್.ಜೆ. ರವರು ಓ.ಡಿ. ಎ.ಡಿ ಖಾತೆಗಳನ್ನು ಹೊಂದಿದ್ದರು. ಯಾಮಿನಿ ರವರ ಓಡಿ ಖಾತೆ ಸಂಖ್ಯೆ. 1257000300011501 ರಿಂದ ರೂ.74,00,000/- ಹಣವನ್ನು ಯಾಮಿನಿ ರವರ ಯಾವುದೇ ನಿರ್ದೇಶನವಿಲ್ಲದೆ,

ಡೆಬಿಡ್ ಸ್ಲಿಪ್ ಗಳ ಮೇಲೆ ಚೆಕ್ ನಂಬರಗಳನ್ನು ನಮೂದಿಸಿ, ಆರೋಪಿಯು ಡೆಬಿಟ್ ಸ್ಲಿಪ್ ಗಳ ಮೇಲೆ ಸಹಿ ಮಾಡಿ ಬೇರೆ ಬೇರೆ ಖಾತೆಗಳಿಗೆ ಬೇರೆ ಬೇರೆ ದಿನಾಂಕಗಳಂದು ವರ್ಗಾವಣೆ ಮಾಡಿರುತ್ತಾರೆ.

3. ಯಶಸ್ವಿನಿ ರವರ ಓಡಿ ಖಾತೆ ಸಂಖ್ಯೆ. 1257000300011601 ರಿಂದ ರೂ.53,50,000/- ಹಣವನ್ನು ಯಶಸ್ವಿನಿ ರವರ ಯಾವುದೇ ನಿರ್ದೇಶನವಿಲ್ಲದೆ, ಡೆಬಿಡ್ ಸ್ಲಿಪ್ ಗಳ ಮೇಲೆ ಚೆಕ್ ನಂಬರಗಳನ್ನು ನಮೂದಿಸಿ, ಆರೋಪಿಯು ಡೆಬಿಟ್ ಸ್ಲಿಪ್ ಗಳ ಮೇಲೆ ಸಹಿ ಮಾಡಿ ಬೇರೆ ಬೇರೆ ಖಾತೆಗಳಿಗೆ ಬೇರೆ ಬೇರೆ ದಿನಾಂಕಗಳಂದು ವರ್ಗಾವಣೆ ಮಾಡಿರುತ್ತಾರೆ.

4. ಮಿಥುನ ರವರ ಓಡಿ ಖಾತೆ ಸಂಖ್ಯೆ. 1257000300011701 ರಿಂದ ರೂ.74,00,000/- ಹಣವನ್ನು ಮಿಥುನ ರವರ ಯಾವುದೇ ನಿರ್ದೇಶನವಿಲ್ಲದೆ, ಡೆಬಿಡ್ ಸ್ಲಿಪ್ ಗಳ ಮೇಲೆ ಚೆಕ್ ನಂಬರಗಳನ್ನು ನಮೂದಿಸಿ, ಆರೋಪಿಯು ಡೆಬಿಟ್ ಸ್ಲಿಪ್ ಗಳ ಮೇಲೆ ಸಹಿ ಮಾಡಿ ಬೇರೆ ಬೇರೆ ಖಾತೆಗಳಿಗೆ ಬೇರೆ ಬೇರೆ ದಿನಾಂಕಗಳಂದು ವರ್ಗಾವಣೆ ಮಾಡಿರುತ್ತಾರೆ.

5. ಯಾಮಿನಿಯವರ ಖಾತೆಯಿಂದ ಮಂಜುನಾಥ ಎಮ್. ರವರ ಚಾಲ್ತಿ ಖಾತೆಗೆ ದಿನಾಂಕ 20/05/2017 ರಂದು ರೂ.50,00,000/- ಹಣವನ್ನು ಡೆಬಿಟ್ ಸ್ಲಿಪ್ ಗಳ ಮೇಲೆ ಚೆಕ್ ನಂಬರ್ ನಮೂದಿಸಿ ವರ್ಗಾವಣೆ ಮಾಡಿರುತ್ತಾರೆ. ಡೆಬಿಟ್ ಸ್ಲಿಪ್ ನ್ನು ಆರೋಪಿಯೇ ಬರೆದು ಸಹಿ ಮಾಡಿರುತ್ತಾರೆ.

6. ಯಾಮಿನಿಯವರ ಖಾತೆಯಿಂದ ಕೋಕೊನಟ್ ಗ್ರೋ ರವರ ಚಾಲ್ತಿ ಖಾತೆಗೆ ದಿನಾಂಕ 29/06/2017 ರಂದು ರೂ.20,00,000/- ಹಣವನ್ನು ಡೆಬಿಟ್ ಸ್ಲಿಪ್ ಗಳ ಮೇಲೆ ಚೆಕ್ ನಂಬರ್ ನಮೂದಿಸಿ ವರ್ಗಾವಣೆ ಮಾಡಿರುತ್ತಾರೆ. ಡೆಬಿಟ್ ಸ್ಲಿಪ್ ನ್ನು ಆರೋಪಿಯೇ ಬರೆದು ಸಹಿ ಮಾಡಿರುತ್ತಾರೆ.

7. ಯಾಮಿನಿಯವರ ಖಾತೆಯಿಂದ ಕೃಷ್ಣಕುಮಾರ ರವರ ಓ.ಡಿ. ಖಾತೆಗೆ ದಿನಾಂಕ 10/07/2017 ರಂದು ರೂ.4,00,000/- ಹಣವನ್ನು ಡೆಬಿಟ್ ಸ್ಲಿಪ್ ಗಳ ಮೇಲೆ ಚೆಕ್

ನಂಬರ್ ನಮೂದಿಸಿ ವರ್ಗಾವಣೆ ಮಾಡಿರುತ್ತಾರೆ. ಡೆಬಿಟ್ ಸ್ಲಿಪ್ ನ್ನು ಆರೋಪಿಯೇ ಬರೆದು ಸಹಿ ಮಾಡಿರುತ್ತಾರೆ.

8. ಯಶಸ್ವಿನಿ ರವರ ಖಾತೆಯಿಂದ ಮಂಜುನಾಥ ಎಮ್.ಕೆ. ರವರ ಉಳಿತಾಯ ಖಾತೆಗೆ ದಿನಾಂಕ 16/05/2017 ರಂದು ರೂ.3,00,000/- ಹಣವನ್ನು ಡೆಬಿಟ್ ಸ್ಲಿಪ್ ಗಳ ಮೇಲೆ ಚೆಕ್ ನಂಬರ್ ನಮೂದಿಸಿ ವರ್ಗಾವಣೆ ಮಾಡಿರುತ್ತಾರೆ. ಡೆಬಿಟ್ ಸ್ಲಿಪ್ ನ್ನು ಆರೋಪಿಯೇ ಬರೆದು ಸಹಿ ಮಾಡಿರುತ್ತಾರೆ.

9. ಯಶಸ್ವಿನಿ ರವರ ಖಾತೆಯಿಂದ ನಾಗೇಶ ರವರ ಉಳಿತಾಯ ಖಾತೆಗೆ ದಿನಾಂಕ 16/05/2017 ರಂದು ರೂ.2,00,000/- ಹಣವನ್ನು ಡೆಬಿಟ್ ಸ್ಲಿಪ್ ಗಳ ಮೇಲೆ ಚೆಕ್ ನಂಬರ್ ನಮೂದಿಸಿ ವರ್ಗಾವಣೆ ಮಾಡಿರುತ್ತಾರೆ. ಡೆಬಿಟ್ ಸ್ಲಿಪ್ ನ್ನು ಆರೋಪಿಯೇ ಬರೆದು ಸಹಿ ಮಾಡಿರುತ್ತಾರೆ.

10. ನಾಗೇಶ ಮತ್ತು ಮಂಜುನಾಥ ಎಮ್.ಕೆ. ರವರಿಗೆ ವರ್ಗಾವಣೆಯಾದ ಡೆಬಿಟ್ ಸ್ಲಿಪ್ ಗಳ ಮೇಲೆ ಒಂದೇ ಚೆಕ್ ನಂಬರ್ ನ್ನು ಆರೋಪಿಯೇ ನಮೂದಿಸಿರುತ್ತಾರೆ.

11. ಯಶಸ್ವಿನಿ ರವರ ಖಾತೆಯಿಂದ ಕೋಕೋನಟರ್ ಗ್ರೋ ರವರ ಚಾಲ್ತಿ ಖಾತೆಗೆ ದಿನಾಂಕ 30/05/2017 ರಂದು ರೂ.5,50,000/- ಹಣವನ್ನು ಡೆಬಿಟ್ ಸ್ಲಿಪ್ ಗಳ ಮೇಲೆ ಚೆಕ್ ನಂಬರ್ ನಮೂದಿಸಿ ವರ್ಗಾವಣೆ ಮಾಡಿರುತ್ತಾರೆ. ಡೆಬಿಟ್ ಸ್ಲಿಪ್ ನ್ನು ಆರೋಪಿಯೇ ಬರೆದು ಸಹಿ ಮಾಡಿರುತ್ತಾರೆ.

12. ಯಶಸ್ವಿನಿ ರವರ ಖಾತೆಯಿಂದ ಮಂಜುನಾಥ ಎಮ್.ಕೆ. ರವರ ಚಾಸಲ್ತಿ ಖಾತೆಗೆ ದಿನಾಂಕ 12/06/2017 ರಂದು ರೂ.20,00,000/- ಹಣವನ್ನು ಡೆಬಿಟ್ ಸ್ಲಿಪ್ ಗಳ ಮೇಲೆ ಚೆಕ್ ನಂಬರ್ ನಮೂದಿಸಿ ವರ್ಗಾವಣೆ ಮಾಡಿರುತ್ತಾರೆ. ಡೆಬಿಟ್ ಸ್ಲಿಪ್ ನ್ನು ಆರೋಪಿಯೇ ಬರೆದು ಸಹಿ ಮಾಡಿರುತ್ತಾರೆ.

13. ಯಶಸ್ವಿನಿ ರವರ ಖಾತೆಯಿಂದ ಕೃಷ್ಣಕುಮಾರ ರವರ ಓ.ಡಿ. ಖಾತೆಗೆ ದಿನಾಂಕ 12/06/2017 ರಂದು ರೂ.5,00,000/- ಹಣವನ್ನು ಡೆಬಿಟ್ ಸ್ಲಿಪ್ ಗಳ ಮೇಲೆ ಚೆಕ್

ನಂಬರ್ ನಮೂದಿಸಿ ವರ್ಗಾವಣೆ ಮಾಡಿರುತ್ತಾರೆ. ಡೆಬಿಟ್ ಸ್ಲಿಪ್ ನ್ನು ಆರೋಪಿಯೇ ಬರೆದು ಸಹಿ ಮಾಡಿರುತ್ತಾರೆ.

14. ಯಶಸ್ವಿನಿ ರವರ ಖಾತೆಯಿಂದ ಕೃಷ್ಣಕುಮಾರ ರವರ ಓ.ಡಿ. ಖಾತೆಗೆ ದಿನಾಂಕ 28/06/2017 ರಂದು ರೂ.5,00,000/- ಹಣವನ್ನು ಡೆಬಿಟ್ ಸ್ಲಿಪ್ ಗಳ ಮೇಲೆ ಚೆಕ್ ನಂಬರ್ ನಮೂದಿಸಿ ವರ್ಗಾವಣೆ ಮಾಡಿರುತ್ತಾರೆ. ಡೆಬಿಟ್ ಸ್ಲಿಪ್ ನ್ನು ಆರೋಪಿಯೇ ಬರೆದು ಸಹಿ ಮಾಡಿರುತ್ತಾರೆ.

15. ಯಶಸ್ವಿನಿ ರವರ ಖಾತೆಯಿಂದ ಕೃಷ್ಣಕುಮಾರ ರವರ ಓ.ಡಿ ಖಾತೆಗೆ ದಿನಾಂಕ 29/06/2017 ರಂದು ರೂ.3,00,000/- ಹಣವನ್ನು ಡೆಬಿಟ್ ಸ್ಲಿಪ್ ಗಳ ಮೇಲೆ ಚೆಕ್ ನಂಬರ್ ನಮೂದಿಸಿ ವರ್ಗಾವಣೆ ಮಾಡಿರುತ್ತಾರೆ. ಡೆಬಿಟ್ ಸ್ಲಿಪ್ ನ್ನು ಆರೋಪಿಯೇ ಬರೆದು ಸಹಿ ಮಾಡಿರುತ್ತಾರೆ.

16. ಯಶಸ್ವಿನಿ ರವರ ಖಾತೆಯಿಂದ ಯಶೋಧಾ ಮತ್ತು ಕೋಡಿಗೌಡ ರವರ ಜಂಟಿ ಉಳಿತಾಯ ಖಾತೆಗೆ ದಿನಾಂಕ 06/07/2017 ರಂದು ರೂ.5,00,000/- ಹಣವನ್ನು ಡೆಬಿಟ್ ಸ್ಲಿಪ್ ಗಳ ಮೇಲೆ ಚೆಕ್ ನಂಬರ್ ನಮೂದಿಸಿ ವರ್ಗಾವಣೆ ಮಾಡಿರುತ್ತಾರೆ. ಡೆಬಿಟ್ ಸ್ಲಿಪ್ ನ್ನು ಆರೋಪಿಯೇ ಬರೆದು ಸಹಿ ಮಾಡಿರುತ್ತಾರೆ.

17. ಯಶಸ್ವಿನಿ ರವರ ಖಾತೆಯಿಂದ ಕೃಷ್ಣಕುಮಾರ ರವರ ಓ.ಡಿ. ಖಾತೆಗೆ ದಿನಾಂಕ 10/07/2017 ರಂದು ರೂ.5,00,000/- ಹಣವನ್ನು ಡೆಬಿಟ್ ಸ್ಲಿಪ್ ಗಳ ಮೇಲೆ ಚೆಕ್ ನಂಬರ್ ನಮೂದಿಸಿ ವರ್ಗಾವಣೆ ಮಾಡಿರುತ್ತಾರೆ. ಡೆಬಿಟ್ ಸ್ಲಿಪ್ ನ್ನು ಆರೋಪಿಯೇ ಬರೆದು ಸಹಿ ಮಾಡಿರುತ್ತಾರೆ.

18. ಮಿಥುನ್ ಹೆಚ್.ಜೆ. ರವರ ಖಾತೆಯಿಂದ ಪ್ರದೀಪ ಕೆ. ರವರ ಉಳಿತಾಯ ಖಾತೆಗೆ ದಿನಾಂಕ 10/03/2017 ರಂದು ರೂ.15,00,000/- ಹಣವನ್ನು ಡೆಬಿಟ್ ಸ್ಲಿಪ್ ಗಳ ಮೇಲೆ ಚೆಕ್ ನಂಬರ್ ನಮೂದಿಸಿ ವರ್ಗಾವಣೆ ಮಾಡಿರುತ್ತಾರೆ. ಡೆಬಿಟ್ ಸ್ಲಿಪ್ ನ್ನು ಆರೋಪಿಯೇ ಬರೆದು ಸಹಿ ಮಾಡಿರುತ್ತಾರೆ.

19. ಮಿಥುನ್ ಹೆಚ್.ಜೆ. ರವರ ಖಾತೆಯಿಂದ ಪ್ರದೀಪ ಕೆ. ರವರ ಚಾಲ್ತಿ ಖಾತೆಗೆ ದಿನಾಂಕ 16/03/2017 ರಂದು ರೂ.15,00,000/- ಹಣವನ್ನು ಡೆಬಿಟ್ ಸ್ಲಿಪ್ ಗಳ ಮೇಲೆ ಚೆಕ್ ನಂಬರ್ ನಮೂದಿಸಿ ವರ್ಗಾವಣೆ ಮಾಡಿರುತ್ತಾರೆ. ಡೆಬಿಟ್ ಸ್ಲಿಪ್ ನ್ನು ಆರೋಪಿಯೇ ಬರೆದು ಸಹಿ ಮಾಡಿರುತ್ತಾರೆ.

20. ಮಿಥುನ್ ಹೆಚ್.ಜೆ. ರವರ ಖಾತೆಯಿಂದ ಪ್ರದೀಪ ಕೆ. ರವರ ಚಾಲ್ತಿ ಖಾತೆಗೆ ದಿನಾಂಕ 16/03/2017 ರಂದು ರೂ.10,00,000/- ಹಣವನ್ನು ಡೆಬಿಟ್ ಸ್ಲಿಪ್ ಗಳ ಮೇಲೆ ಚೆಕ್ ನಂಬರ್ ನಮೂದಿಸಿ ವರ್ಗಾವಣೆ ಮಾಡಿರುತ್ತಾರೆ. ಡೆಬಿಟ್ ಸ್ಲಿಪ್ ನ್ನು ಆರೋಪಿಯೇ ಬರೆದು ಸಹಿ ಮಾಡಿರುತ್ತಾರೆ.

21. ಮಿಥುನ್ ಹೆಚ್.ಜೆ. ರವರ ಖಾತೆಯಿಂದ ಮಂಜುನಾಥ ಎಮ್. ರವರ ಚಾಲ್ತಿ ಖಾತೆಗೆ ದಿನಾಂಕ 27/03/2017 ರಂದು ರೂ.15,00,000/- ಹಣವನ್ನು ಡೆಬಿಟ್ ಸ್ಲಿಪ್ ಗಳ ಮೇಲೆ ಚೆಕ್ ನಂಬರ್ ನಮೂದಿಸಿ ವರ್ಗಾವಣೆ ಮಾಡಿರುತ್ತಾರೆ. ಡೆಬಿಟ್ ಸ್ಲಿಪ್ ನ್ನು ಆರೋಪಿಯೇ ಬರೆದು ಸಹಿ ಮಾಡಿರುತ್ತಾರೆ.

22. ಮಿಥುನ್ ಹೆಚ್.ಜೆ. ರವರ ಖಾತೆಯಿಂದ ಕೃಷ್ಣಕುಮಾರ ರವರ ಓ.ಡಿ. ಖಾತೆಗೆ ದಿನಾಂಕ 21/06/2017 ರಂದು ರೂ.5,00,000/- ಹಣವನ್ನು ಡೆಬಿಟ್ ಸ್ಲಿಪ್ ಗಳ ಮೇಲೆ ಚೆಕ್ ನಂಬರ್ ನಮೂದಿಸಿ ವರ್ಗಾವಣೆ ಮಾಡಿರುತ್ತಾರೆ. ಡೆಬಿಟ್ ಸ್ಲಿಪ್ ನ್ನು ಆರೋಪಿಯೇ ಬರೆದು ಸಹಿ ಮಾಡಿರುತ್ತಾರೆ.

23. ಮಿಥುನ್ ಹೆಚ್.ಜೆ. ರವರ ಖಾತೆಯಿಂದ ಯಶೋಧಾ ಮತ್ತು ಕೋಡಿಗೌಡ ರವರ ಜಂಟಿ ಉಳಿತಾಯ ಖಾತೆಗೆ ದಿನಾಂಕ 06/07/2017 ರಂದು ರೂ.5,00,000/- ಹಣವನ್ನು ಡೆಬಿಟ್ ಸ್ಲಿಪ್ ಗಳ ಮೇಲೆ ಚೆಕ್ ನಂಬರ್ ನಮೂದಿಸಿ ವರ್ಗಾವಣೆ ಮಾಡಿರುತ್ತಾರೆ. ಡೆಬಿಟ್ ಸ್ಲಿಪ್ ನ್ನು ಆರೋಪಿಯೇ ಬರೆದು ಸಹಿ ಮಾಡಿರುತ್ತಾರೆ.

24. ಮಿಥುನ್ ಹೆಚ್.ಜೆ. ರವರ ಖಾತೆಯಿಂದ ಕೃಷ್ಣಕುಮಾರ ರವರ ಓ.ಡಿ. ಖಾತೆಗೆ ದಿನಾಂಕ 10/07/2017 ರಂದು ರೂ.9,00,000/- ಹಣವನ್ನು ಡೆಬಿಟ್ ಸ್ಲಿಪ್

ಗಳ ಮೇಲೆ ಚೆಕ್ ನಂಬರ್ ನಮೂದಿಸಿ ವರ್ಗಾವಣೆ ಮಾಡಿರುತ್ತಾರೆ. ಡೆಬಿಟ್ ಸ್ಲಿಪ್ ನ್ನು ಆರೋಪಿಯೇ ಬರೆದು ಸಹಿ ಮಾಡಿರುತ್ತಾರೆ.

25. ಯಶಶ್ವಿಸಿ , ಯಾಮಿನಿ ಮತ್ತು ಮಿಥುನ ರವರು ತಮ್ಮ ಖಾತೆಗಳಿಂದ ಹಣ ತೆಗೆದಿರುವ ಬಗ್ಗೆ ತಕರಾರು ಮಾಡಿ, ಆರೋಪಿಯ ಮೇಲೆ ಒತ್ತಡ ಹೇರಿದ್ದರಿಂದ ದಿನಾಂಕ 04/12/2017 ರಂದು ಕೋಕೋನಟ್ ಗ್ರೋ ಚಾಲ್ತಿ ಖಾತೆಗೆ ರೂ.90,00,000/-, ಪ್ರದೀಪ ಕೆ. ರವರ ಚಾಲ್ತಿ ಖಾತೆಗೆ ರೂ.21,50,000/- , ಮಂಜುನಾಥ ಎಮ್. ರವರ ಚಾಲ್ತಿ ಖಾತೆಗೆ ರೂ. 85,00,000/- ಮತ್ತು ಮಂಜುನಾಥ ಎಮ್.ಕೆ. ರವರ ಚಾಲ್ತಿ ಖಾತೆಗೆ ರೂ.5,00,000/- ಹಣವನ್ನು ಜಮಾ ಮಾಡಿರುತ್ತಾರೆ. ಆರೋಪಿಯು ಕೋಕೋನಟ್ ಗ್ರೋ, ಪ್ರದೀಪ, ಮಂಜುನಾಥ ಎಮ್., ಮತ್ತು ಮಂಜುನಾಥ ಎಮ್.ಕೆ., ರವರಿಂದ ಯಾವುದೇ ಹಣವನ್ನು ಪಡೆಯದೆ ಸದರಿಯವರ ಖಾತೆಗೆ ಮೇಲೆ ಹೇಳಿದ ರೀತಿಯಲ್ಲಿ ಜಮಾ ಮಾಡಿರುತ್ತಾರೆ.

26. ದಿನಾಂಕ 04/12/2017 ರಂದು ಆರೋಪಿಯು ಯಾಮಿನಿ ಹೆಚ್.ಜೆ., ರವರ ಓಡಿ. ಖಾತೆಗೆ ಕೋಕೋನಟ್ ಗ್ರೋ ಖಾತೆಯಿಂದ ರೂ.20,00,000/-, ಕೃಷ್ಣಕುಮಾರ ರವರ ಖಾತೆಯಿಂದ ರೂ.4,00,000/- ಮತ್ತು ಮಂಜುನಾಥ ರವರ ಖಾತೆಯಿಂದ ರೂ.50,00,000/- ಒಟ್ಟು ರೂ.74,00,000/- ಹಣವನ್ನು ಮರುಜಮಾ ಮಾಡಿರುತ್ತಾರೆ. ಸದರಿ ರೂ.74,00,000/- ಹಣವನ್ನು ಯಾಮಿನಿರವರ ಹೆಸರಿನಲ್ಲಿ ಎಫ್.ಡಿ. ಮಾಡಿರುತ್ತಾರೆ.

27. ದಿನಾಂಕ 04/12/2017 ರಂದು ಆರೋಪಿಯು ಯಶಸ್ವಿನಿ ಹೆಚ್.ಜೆ., ರವರ ಓ.ಡಿ-ಎ.ಡಿ. ಖಾತೆಗೆ ಮಂಜುನಾಥ ಎಮ್.ಕೆ ರವರ ಉಳಿತಾಯ ಖಾತೆಯಿಂದ ರೂ.5,00,000/-, ಯಶೋಧಾ ಮತ್ತು ಕೋಡಿಗೌಡ ರವರ ಜಂಟಿ ಉಳಿತಾಯ ಖಾತೆಯಿಂದ ರೂ.5,00,000/- , ಕೃಷ್ಣಕುಮಾರ ರವರ ಚಾಲ್ತಿ ಖಾತೆಯಿಂದ ರೂ.5,00,000/-, ರೂ.3,00,000/-, ರೂ.5,00,000 ಮತ್ತು ರೂ. 5,00,000/- ಒಟ್ಟು ರೂ.18,00,000/- ಹಾಗೂ ಮಂಜುನಾಥ ಎಮ್. ರವರ ಚಾಲ್ತಿ ಖಾತೆಯಿಂದ

ರೂ.20,00,000/- ಒಟ್ಟು ರೂ. 53,50,000/- ಹಣವನ್ನು ಮರುಜಮಾ ಮಾಡಿ ಯಶಸ್ವಿನಿ ರವರ ಹೆಸರಿನಲ್ಲಿ ಎಫ್.ಡಿ. ಮಾಡಿರುತ್ತಾರೆ.

28. ಮಿಥುನ್ ಎಸ್.ಜೆ. ರವರ ಖಾತೆಗೆ ಕೃಷ್ಣಕುಮಾರ ರವರ ಚಾಲ್ತಿ ಖಾತೆಯಿಂದ ರೂ.5,00,000/- ಮತ್ತು ರೂ. 9,00,000/- , ಮಂಜುನಾಥ ಎಮ್. ರವರ ಚಾಲ್ತಿ ಖಾತೆಯಿಂದ ರೂ.15,00,000/-, ಪ್ರದೀಪ ಕೆ. ರವರ ಚಾಲ್ತಿ ಖಾತೆಯಿಂದ ರೂ.10,00,000/- , ರೂ.15,00,000/- ಮತ್ತು ರೂ.15,00,000/- ಹಾಗೂ ಯಶೋಧಾ ಮತ್ತು ಕೋಡಿಗೌಡ ರವರ ಜಂಟಿ ಖಾತೆಯಿಂದ ರೂ. 5,00,000/- ಒಟ್ಟು ರೂ.74,00,000/- ಹಣವನ್ನು ಮರುಜಮಾ ಮಾಡಿ ಮಿಥುನ್ ರವರ ಹೆಸರಿನಲ್ಲಿ ಎಫ್.ಡಿ. ಮಾಡಿರುತ್ತಾರೆ.

29. ರಾಜು ಥಾಮಸ್ ರವರು ಕೋಕೋನಟ್ ಗ್ರೋ ಎಂಬ ಹೆಸರಿನಲ್ಲಿ ಚಾಲ್ತಿ ಖಾತೆಯನ್ನು ಹೊಂದಿದ್ದು, ಅದರ ಸಂಖ್ಯೆ. 1252000100010101 ಆಗಿರುತ್ತದೆ. ದಿನಾಂಕ 14/12/2017 ಸದರಿ ಖಾತೆಯಿಂದ ಪ್ರದೀಪ್ ಕೆ. ರವರ ಚಾಲ್ತಿ ಖಾತೆಗೆ ರೂ.18,50,000/-, ಕೃಷ್ಣ ಕುಮಾರ ರವರ ಚಾಲ್ತಿ ಖಾತೆಗೆ ರೂ.36,00,000/- ಮತ್ತು ಯಶೋಧಾ ಮತ್ತು ಕೋಡಿಗೌಡ ರವರ ಜಂಟಿ ಖಾತೆಗೆ ರೂ.10,00,000/- ಹಣವನ್ನು ಚೆಕ್ ಮೂಲಕ ಆರೋಪಿಯು ವರ್ಗಾವಣೆ ಮಾಡಿರುತ್ತಾರೆ. ದಿನಾಂಕ 04/12/2017 ರಂದು ಯಾಮಿನಿ, ಯಶಸ್ವಿನಿ ಮತ್ತು ಮಿಥುನ್ ರವರ ಖಾತೆಗೆ ಗಳಿಗೆ ಚೆಕ್ ಗಳ ಮೂಲಕ ಹಣ ವರ್ಗಾವಣೆಯಾಗಿರುತ್ತದೆ.

30. ಮಾನ್ಯ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ಹೆಸರಿನಲ್ಲಿ ಎಲ್.ಎ.ಸಿ. ನಂ. 56/2012 ಮತ್ತು ನಂ. 66/2012 ಪ್ರಕರಣಗಳಿಗೆ ಸಂಬಂಧಪಟ್ಟಂತೆ ಒಟ್ಟು ಎರಡು ಪ್ರತ್ಯೇಕ ಎಫ್.ಡಿ. ಗಳಿದ್ದವು.

31. ಎಲ್,ಎ.ಸಿ. ನಂ. 56/2012 ಕ್ಕೆ ಸಂಬಂಧಪಟ್ಟಂತೆ 1251500200354801 ರಲ್ಲಿ ರೂ. 2,11,53,576/- ಹಣ ಠೇವಣಿ ಇದ್ದು, ಸದರಿ ಠೇವಣಿಯು ದಿನಾಂಕ 26/07/2018 ರಂದು ಅವಧಿ ಮುಗಿಯುತ್ತಿತ್ತು, ದಿನಾಂಕ

04/12/2017 ರಂದು ಆರೋಪಿಯು ಸದರಿ ಎಫ್.ಡಿಯನ್ನು ಅವಧಿಗಿಂತ ಮುಂಚಿತವಾಗಿ ಮುಕ್ತಾಯ ಮಾಡಿ ರೂ.2,14,56,335/- ಹಣವನ್ನು ಮತ್ತು

32. ಎಲ್,ಎ.ಸಿ. ನಂ.66/2012 ಕ್ಕೆ ಸಂಬಂಧಪಟ್ಟಂತೆ 1251500200354901 ರಲ್ಲಿ ರೂ.33,04,695/- ಹಣ ಠೇವಣಿ ಇದ್ದು, ಸದರಿ ಠೇವಣಿಯು ದಿನಾಂಕ 26/07/2018 ರಂದು ಅವಧಿ ಮುಗಿಯುತ್ತಿತ್ತು, ದಿನಾಂಕ 04/12/2017 ರಂದು ಆರೋಪಿಯು ಸದರಿ ಎಫ್.ಡಿಯನ್ನು ಅವಧಿಗಿಂತ ಮುಂಚಿತವಾಗಿ ಮುಕ್ತಾಯ ಮಾಡಿ ರೂ.33,66,246/- ಹಣವನ್ನು ಒಟ್ಟು ರೂ.2,48,22,581/- ಡಿ.ಡಿ. ನಂ. 51164 ರ ಮೂಲಕ ಕೋಕೋನಟ್ ಗ್ರೋ ರವರ ಖಾತೆಗೆ ರಾಜು ಥಾಮಸ್ ರವರ ಸಹಕಾರದೊಂದಿಗೆ ಜಮಾ ಮಾಡಿರುತ್ತಾರೆ. ಸದರಿ ಎರಡು ಖಾತೆಗಳಿಗೆ ಸಂಬಂಧಪಟ್ಟಂತೆ ರೂ. 37,008/- ಹಣ ಟಿ.ಡಿ.ಎಸ್.ಕಡಿತ ಮಾಡಿರುತ್ತಾರೆ.

**ಮುಂದಿನ ಮುಖ್ಯ ವಿಚಾರಣೆಯನ್ನು ಅಪರಾಹ್ನಕ್ಕೆ ಮುಂದೂಡಲಾಯಿತು.**

**ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಮುಂದುವರಿದ ಮುಖ್ಯ ವಿಚಾರಣೆಃ**

33. ದಿನಾಂಕ 04/12/2017 ರಂದು ಕಛೇರಿಯ ಅವಧಿ ಮುಗಿದ ಬಳಿಕ ಡಿ.ಡಿ. ನಂ. 51164 ಮೂಲಕ ಕೋಕೋನಟ್ ಗ್ರೋ ಖಾತೆಗೆ ರೂ.2,48,22,581/- ಹಣವನ್ನು ಜಮಾ ಮಾಡಿರುತ್ತಾರೆ. ಸದರಿ ಕೋಕೋನಟ್ ಗ್ರೋ ಸಂಸ್ಥೆಯ ಮಾಲೀಕರ ಹೆಸರು ರಾಜು ಥಾಮಸ್.

34. ದಿನಾಂಕ 04/12/2017 ರಂದು ಕಛೇರಿಯ ಅವಧಿ ಮುಗಿದ ಬಳಿಕ ರಾಜು ಥಾಮಸ್ ರವರು ನೀಡಿರುವ ಚೆಕ್ ಸಂಖ್ಯೆ.145390 ಆರೋಪಿಯು ಕೋಕೋನಟ್ ಗ್ರೋ ಖಾತೆಯಿಂದ ರೂ.2,41,50,000/- ನಗದಿಕರಿಸಿಕೊಂಡಿರುತ್ತಾರೆ. ಚೆಕ್ ದಿನಾಂಕ 01/12/2017 ಆಗಿದ್ದು, ಅದರ ಮೇಲೆ ದಿನಾಂಕ 03/12/2017 ರ ಬ್ಯಾಂಕ್ ಸೀಲ್ ಇರುತ್ತದೆ, ಸದರಿ ಚೆಕ್ ನ್ನು ದಿನಾಂಕ 04/12/2017 ರಂದು

ನಗದಿಸಿಕರಿಸಿಕೊಂಡಿರುತ್ತಾರೆ. ದಿನಾಂಕ 04/12/2017 ರಂದು ಕಛೇರಿಯ ಅವಧಿಯಲ್ಲಿ ಕೋಕೋನಟ್ ಗ್ರೋ ಖಾತೆಗೆ ಜಮಾ ಮಾಡಿದ್ದ ರೂ.90,00,000/- , ಪ್ರದೀಪ ರವರ ಖಾತೆಗೆ ಜಮಾ ಮಾಡಿದ್ದ ರೂ.21,50,000/- , ಮಂಜುನಾಥ ಎಮ್,ಕೆ. ರವರ ಖಾತೆಗೆ ಜಮಾ ಮಾಡಿದ್ದ ರೂ.85,00,000/- ಹಾಗೂ ಮಂಜುನಾಥ ಎಮ್. ರವರ ಖಾತೆಗೆ ಜಮಾ ಮಾಡಿದ್ದ ರೂ.5,00,000/- ಗಳಿಗೆ ಹೊಂದಿಸಿ ಉಳಿದ ರೂ.40,00,000/- ಹಣವನ್ನು ಆರೋಪಿ ಬಳಸಿಕೊಂಡಿರುತ್ತಾರೆ.

35. ದಿನಾಂಕ 07/12/2017 ರಂದು 10 ಜನರ ಖಾತೆಗಳಿಂದ ರೂ.2,44,00,000/- ಹಣವನ್ನು ನಗದೀಕರಿಸಿಕೊಂಡು ಸದರಿ ರೂ.2,44,00,000/- ಹಣವನ್ನು ಕೋಕೋನಟ್ ಗ್ರೋ ಖಾತೆಗೆ ತಲಾ ರೂ.50,00,000/- ರಂತೆ 4 ಬಾರಿ ಮತ್ತು ರೂ.44,00,000/- ಒಂದು ಬಾರಿ ಜಮಾ ಮಾಡಿರುತ್ತಾರೆ. ಮೇಲೆ ಹೇಳಿದ 10 ಜನ ಖಾತೆದಾರರು ಮತ್ತು ನಗದೀಕರಿಸಿಕೊಂಡ ಹಣದ ವಿವರಗಳೆಂದರೆಃ ಮಧುಸೂಧನ ಸಿ.ಬಿ.ರವರಿಂದ ಖಾತೆಯಿಂದ ರೂ.5,00,000/-, ಲಿಂಗೇಗೌಡ ರವರ ಖಾತೆಯಿಂದ ರೂ.5,00,000/-, ಮೇಧಾ ರಿಯಾಲಿಟೀಸ್ ರವರ ಖಾತೆಯಿಂದ ರೂ.60,00,000/-, ಲೋಲಾಕ್ಷಿ ರವರ ಖಾತೆಯಿಂದ ರೂ.5,00,000/-, ಪುಟ್ಟರಾಜುರವರ ಖಾತೆಯಿಂದ ರೂ.80,00,000/- , ದೇವರಾಜುರವರ ಖಾತೆಯಿಂದ ರೂ.60,00,000/-, ಜಯಲಕ್ಷ್ಮಿ ರವರ ಖಾತೆಯಿಂದ ರೂ.16,00,000/-, ಮಮತಾ ರವರ ಖಾತೆಯಿಂದ ರೂ.3,00,000/-, ರಘುನಾಥ ರವರ ಖಾತೆಯಿಂದ ರೂ.4,00,000/- ಮತ್ತು ಲೋಕೇಶ ರವರ ಖಾತೆಯಿಂದ ರೂ.6,00,000/- ಒಟ್ಟು ರೂ.2,44,00,000/- ಹಣವನ್ನು ಪಡೆದುಕೊಂಡಿರುತ್ತಾರೆ.

36. ಒಂದೊಮ್ಮೆ ನ್ಯಾಯಾಲಯವು ಬ್ಯಾಂಕ್ ನಲ್ಲಿ ಠೇವಣಿ ಇಟ್ಟ ಪಕ್ಷದಲ್ಲಿ ನ್ಯಾಯಾಲಯದ ಆದೇಶವಿಲ್ಲದೆ ಠೇವಣಿ ಹಣವನ್ನು ಪಡೆಯುವಂತಿಲ್ಲ. ಆರೋಪಿಯು ನ್ಯಾಯಾಲಯದ ಆದೇಶವಿಲ್ಲದೆ ನ್ಯಾಯಾಲಯದ ಹೆಸರಿನಲ್ಲಿದ್ದ ಹಣವನ್ನು ಪಡೆದಿರುತ್ತಾರೆ. ಸಿಟಿ ಸಿವಿಲ್ ನ್ಯಾಯಾಲಯದ ರೆಜಿಸ್ಟ್ರಿ ರ್ ರವರು ರಾಜು ಥಾಮಸ್

ರವರ ಪರವಾಗಿ ಆದೇಶವನ್ನು ಮಾಡಿ ನ್ಯಾಯಾಲಯದ ಹೆಸರಿನಲ್ಲಿರುವ ಠೇವಣಿ ಹಣವನ್ನು ನಗದೀಕರಿಸಿಕೊಳ್ಳುವಂತೆ ನ್ಯಾಯಾಲಯ ಸೂಚಿಸುತ್ತದೆ ಎಂದು ಆರೋಪಿಯು ಮೇಲಾಧಿಕಾರಿಗಳಿಗೆ ಹೇಳಿರುತ್ತಾರೆ. ಸಿಟಿ ಸಿವಿಲ್ ನ್ಯಾಯಾಲಯದ ರೆಜಿಸ್ಟ್ರ ರ್ ರವರು ನೀಡಿರುತ್ತಾರೆ ಎಂದು ಹೇಳಲಾದ ಆದೇಶದ ಪ್ರತಿಯನ್ನು ನಮ್ಮ ಮೇಲಾಧಿಕಾರಿಗಳು ಕೊಟ್ಟಿರುತ್ತಾರೆ. ಒಂದೊಮ್ಮೆ ನ್ಯಾಯಾಧೀಶರು ಮಾಡಿದ ಆದೇಶವನ್ನು ಹಾಜರು ಪಡಿಸಿದರೆ ಮಾತ್ರ ಬ್ಯಾಂಕ್ ನವರು ನ್ಯಾಯಾಲಯದ ಠೇವಣಿಗಳನ್ನು ನಗದೀಕರಿಸಲು ಸಾಧ್ಯ. ನ್ಯಾಯಾಲಯದ ಠೇವಣಿಗಳನ್ನು ನಗದೀಕರಿಸಿದ ನಂತರ ಪುನಃ ಅದೇ ಠೇವಣಿಗೆ ಹಣ ತುಂಬಲು ಸಾಧ್ಯವಿಲ್ಲ. ನ್ಯಾಯಾಲಯದ ಆದೇಶದ ಪ್ರತಿ ಮತ್ತು ಠೇವಣಿ ರಶೀದಿಗಳನ್ನು ಕೊಟ್ಟರೆ ಮಾತ್ರ ಬ್ಯಾಂಕ್ ನಿಂದ ಹಣ ಪಡೆಯಲು ಸಾಧ್ಯ. ಈ ಪ್ರಕರಣದಲ್ಲಿ ಠೇವಣಿ ರಶೀದಿಗಳ ಕಲರ್ ಜರಾಕ್ಸ ಪ್ರತಿಗಳನ್ನು ಕೊಡಲಾಗಿದೆ.

**ಮುಂದುವರಿದ ಮುಖ್ಯ ವಿಚಾರಣೆಗೆ ಹಿ.ಸ.ಸ.ಅ ರವರು ಸಮಯ ಕೋರಿರುತ್ತಾರೆ, ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯ್ತು)

**ಓ.ಹೇ.ಕೇ.ಸ.ಇದೆ**

**3 ನೇ ಎ.ಸಿ.ಎಮ್.ಎಮ್.ನ್ಯಾ.**

**ಬೆಂಗಳೂರು.**